ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 637/2022

ಸಿ ಡಬ್ಲ್ಯೂ-4

ಪಿ ಡಬ್ಲ್ಯೂ-5

ದಿಃ 29-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಸಂತೋಷ ಎಳಗದ್ದೆ |
| ತಂದೆಯ ಹೆಸರುಃ | ದೇವು ಎಳಗದ್ದೆ |
| ವಯಸ್ಸುಃ | 48 ವರ್ಷ |
| ಉದ್ಯೋಗಃ | ಆಹಾರ ನಿರೀಕ್ಷಕರು, ಅಂಕೋಲಾ |
| ವಿಳಾಸಃ | ಹಿಚ್ಕಡ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ದಿಃ28-05-2021 ರಂದು ಬೆಳಿಗ್ಗೆ 6.30 ಕ್ಕೆ ಚಾಸಾ-1 ರವರಿಗೆ ಕರೆ ಮಾಡಿ, ಮಂಜುಗುಣಿ ಖಾರ್ವಿವಾಡಾ ಕಡೆಗೆ ಒಂದು ಟಾಟಾ ಏಸ್ ಗಾಡಿ ಸಂಖ್ಯೆ ಕೆ ಎ 30 ಎ 0066 ನೆದ್ದು ಹೊರಟಿದ್ದು, ಅದರಲ್ಲಿ ಪಡಿತರ ಅಕ್ಕಿ ತುಂಬಿಕೊಂಡು ಹೋಗುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ನಂತರ ತಹಶೀಲ್ದಾರ ಇವರಿಗೆ ಕರೆ ಮಾಡಿದ್ದು, ನಾನು ಮತ್ತು ಚಾಸಾ-1 ರವರು ಮಾಹಿತಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ಅಲ್ಲಿಗೆ ಹೋಗಿ ಮುಟ್ಟಿದಾಗ ರಾತ್ರಿ 7.15 ಗಂಟೆಯಾಗಿರುತ್ತದೆ. ನಂತರ ನಾವು ಸದರಿ ವಾಹನವನ್ನು ತಡೆಹಿಡಿದಿರುತ್ತೇವೆ. ವಾಹನದಲ್ಲಿ ಪಡಿತರ ಚೀಟಿ ಹೊಂದಿದವರಿಗೆ ಹಂಚಿಕೆ ಮಾಡುವ

ಅಕ್ಕಿಯ 29 ಚೀಲಗಳು ಕಂಡು ಬಂದಿದ್ದು, ವಾಹನದ ಚಾಲಕನು ಅಲ್ಲಿಂದ ಓಡಿ ಹೋಗಿರುತ್ತಾನೆ. ನಂತರ ಅಕ್ಕಿ ಚೀಲವನ್ನು ತಂದು ತೂಕ ಮಾಡಿದಾಗ ಸುಮಾರು 8-9 ಕ್ವಿಂಟಲ್ ಇರುತ್ತವೆ ಎಂದು ಕಂಡುಬಂದಿರುತ್ತದೆ. ಅದರ ಅಂದಾಜು ಮೌಲ್ಯ ರೂ.15 ಸಾವಿರ ಆಗಿರುತ್ತದೆ. ಈ ಬಗ್ಗೆ ಮಂಜುಗುಣಿ ಖಾರ್ವಿವಾಡಾದಲ್ಲಿ ಪಂಚನಾಮೆಯನ್ನು ಜರುಗಿಸಲಾಯಿತು. ನಿಪಿ-1 ಪಂಚನಾಮೆಯ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1ಬಿ ಎಂದು ಗುರುತಿಸಲಾಯಿತು. ಘಟನೆಯ ಕುರಿತು ಹೇಳಿಕೆಯನ್ನು ಕೊಟ್ಟಿರುತ್ತೇನೆ. ನಂತರ ನಾನು ವಾಹನದ ಚಾಲಕನನ್ನು ಗುರುತಿಸಿದ್ದರ ಬಗ್ಗೆ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ. ಆರೋಪಿಗಳಾದ ಜಿ.ಪಿ ನಾಗಪ್ಪ ಶೆಟ್ಟಿ ಮತ್ತು ಲೇಖಾ ನಾಗಪ್ಪ ನಾಯಕ ಇವರನ್ನು ಗುರುತಿಸುತ್ತೇನೆ. 1ನೇ ಮುದ್ದೆ ಮಾಲನ್ನು ಸಾಕ್ಷಿಯು ಗುರುತಿಸುತ್ತಾರೆ.

(ನ್ಯಾಯಾಲಯದ ಮುಂದೆ ಇಂದು ಇಬ್ಬರು ಆರೋಪಿತರು ಇದ್ದು, 2ನೇ ಆರೋಪಿಯು ಗೈರು ಹಾಜರಿದ್ದು, ಆತನ ಗುರುತಿಸುವಿಕೆಗಾಗಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.